## ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನ (ಎನ್.ಎಮ್.ಓ.ಓ.ಪಿ–1)

## (National Mission on Oilseeds and Oilpalm-NMOOP)

ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ಪ್ರಮುಖ ಉದ್ದೇಶಗಳು:**

1) ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.
2) ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
3) ಕ್ಷೇತ್ರ ಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.

### ಕಾರ್ಯಕ್ರಮದ ಅನುಮೋದನೆ ಹಾಗೂ ಅನುಷ್ಠಾನ ಪ್ರಕ್ರಿಯೆ (Procedure for approval and Implementation):

ಕೇಂದ್ರ ಕೃಷಿ ಮತ್ತು ಸಹಕಾರ ಇಲಾಖೆ, ಭಾರತ ಸರ್ಕಾರ ಇವರಿಂದ ಪ್ರತಿ ರಾಜ್ಯಕ್ಕೆ ತಾತ್ಕಾಲಿಕ ಕಾರ್ಯಕ್ರಮವನ್ನು ನೀಡುತ್ತಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಂತೆ ತಿಳಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸೂಚಿಸಲಾದ ಮಾರ್ಗಸೂಚಿಗಳನ್ನು ಹಾಗೂ ಆಯಾ ಬೆಳೆಗಳಲ್ಲಿ ಜಿಲ್ಲೆಯ ಆದ್ಯತೆ ಮತ್ತು ಸಾಮರ್ಥ್ಯತೆಯನ್ನು ಪರಿಗಣನೆಯಲ್ಲಿರಿಸಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನದ ಕಾರ್ಯಕಾರಿ ಸಮಿತಿಯು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಅಭಿಯಾನ ನಿರ್ದೇಶಕರಿಗೆ ಸಲ್ಲಿಸುವುದು.

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

–ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಶೇ.16.2 ಮತ್ತು ಗಿರಿಜನ ಉಪಯೋಜನೆಗೆ ಶೇ. 8ರಷ್ಟು ಅನುದಾನವನ್ನು ಮೀಸಲಿರಿಸುವುದು. ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಯನ್ನಾಧರಿಸಿ ಅನುದಾನವನ್ನು ನಿಗದಿಪಡಿಸುವುದು.

–ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಟ ಶೇ. 33ರಷ್ಟನ್ನು ಮೀಸಲಿರಿಸುವುದು.

–ಮಹಿಳಾ ರೈತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕ್ರಮವಾಗಿ ಅನುದಾನದ ಕನಿಷ್ಟ ಶೇ. 33 ಮತ್ತು 15 ರಷ್ಟನ್ನು ಮೀಸಲಿರಿಸುವುದು.

– ಅಧ್ಯಕ್ಷರು, ಜಿಲ್ಲಾ ಮಟ್ಟದ ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನದಡಿ ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜ ಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜ ಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು. ಬಿತ್ತನೆ ಬೀಜ ಸಹಾಯಾನುದಾನವು ಕೇಂದ್ರ ಮಟ್ಟದಲ್ಲಿ ವಿತರಣೆಯಾಗಿದ್ದಲ್ಲಿ ವಿತರಣೆಯ ನಂತರ ಫಲಾನುಭವಿಗಳ ಪಟ್ಟಿಯನ್ನು ಐಚ್ಛಿಕವಾಗಿ ಪರಿಶೀಲಿಸಿ ಅನುಮೋದಿಸುವುದು.

–ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃ.ವಿ.ವಿ.ಯ ವಲಯ ಸಂಶೋಧನಾ ಕೇಂದ್ರಗಳು, ಕೆ.ವಿ.ಕೆ.ಗಳು, ATMA, NGOಗಳು ಮತ್ತು ಸಹ ಇಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸುವುದು.

–ಜಿಲ್ಲಾ ಮಟ್ಟದ ಯೋಜನಾ ನಿರ್ವಹಣೆ ತಂಡವು ಸಂಶೋಧನಾ ಕೇಂದ್ರಗಳು ಮತ್ತು ಸಹ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

**2017–18 ನೇ ಸಾಲಿನಲ್ಲಿ ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನ ಯೋಜನೆ ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.**

ಬಿತ್ತನೆ ಬೀಜ:

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ, ಪ್ರತಿ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.
- ಹದಿನೈದು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ.

15 ವರ್ಷಗಳಿಂದೀಚೆಗೆ ಬಿಡುಗಡೆಯಾದ ಎಣ್ಣೆಕಾಳು ತಳಿಗಳ ಬಿತ್ತನೆ ಬೀಜಗಳಿಗೆ ಶೇ. 50ರಷ್ಟು ರೆಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ.1800/–ಕ್ಕೆ ಮೀರದಂತೆ ವಿತರಿಸುವುದು. ಹೈಬ್ರಿಡ್ ತಳಿಗಳಿಗೆ ಶೇ. 50ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ.5000/–ಕ್ಕೆ ಮೀರದಂತೆ ವಿತರಿಸುವುದು.

**2017–18 ನೇ ಸಾಲಿನಲ್ಲಿ ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನ ಯೋಜನೆ ಅಡಿಯಲ್ಲಿ ಅನುಸರಿಸಬೇಕಾದ ಘಟಕವಾರು ಮಾರ್ಗಸೂಚಿಗಳು**

## I. ಬೀಜ ಘಟಕ

### 1. ತಳಿವರ್ಧಕ ಬಿತ್ತನೆ ಬೀಜ ಖರೀದಿ

ಕೇಂದ್ರ ಸರ್ಕಾರವು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು, ಇತರೆ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಿಂದ ಹಾಗೂ ಸಂಶೋಧನಾ ಕೇಂದ್ರಗಳಿಂದ ತಳಿವರ್ಧಕ ಬಿತ್ತನೆ ಬೀಜವನ್ನು ಖರೀದಿಸುವ ಬೀಜ ಸಂಸ್ಥೆಗಳಿಗೆ ಮತ್ತು ಇಲಾಖಾ ಬೀಜೋತ್ಪಾದನಾ ಕೇಂದ್ರಗಳಿಗೆ ಖರೀದಿಸಿದ ಬೀಜಕ್ಕೆ ಪೂರ್ತಿ ಹಣವನ್ನು ಮರು ಪಾವತಿ ಮಾಡಲು ಕೇಂದ್ರ ಸರ್ಕಾರವು ನೀಡಿರುವ ಆದೇಶದಂತೆ ನೀಡಲಾಗುವುದು. **ಸದರಿ ಘಟಕವನ್ನು ಕೇಂದ್ರ ಕಛೇರಿಯಿಂದ ಭರಿಸಲಾಗುವುದು.**

### 2. ಪ್ರಮಾಣಿತ ಬೀಜೋತ್ಪಾದನ ಕಾರ್ಯಕ್ರಮ

ಸಕಾಲದಲ್ಲಿ ತಳಿವರ್ಧಕ/ ಮೂಲಬೀಜೋತ್ಪಾದನೆಯ ಬಿತ್ತನೆ ಬೀಜಗಳನ್ನು ಪಡೆದು ಕೃಷಿ ಬೀಜೋತ್ಪಾದನಾ ಕೇಂದ್ರ ಹಾಗೂ ವಿವಿಧ ಬೀಜೋತ್ಪಾದನಾ ಸಂಸ್ಥೆಗಳು (ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಕೆ.ಓ.ಎಫ್.) ಉತ್ಪಾದಿಸಿದ ಪ್ರತಿ ಕ್ವಿಂಟಾಲ್ ಮೂಲ ಬೀಜಕ್ಕೆ ರೂ.1000/–ರಂತೆ ಸಹಾಯಧನ ನೀಡಲಾಗುವುದು. ಬೀಜೋತ್ಪಾದನೆಯನ್ನು ಕಡ್ಡಾಯವಾಗಿ ನೀರಿನ ಅನುಕೂಲವಿರುವ ಪ್ರದೇಶ ಅಥವಾ ಉಪಚರಿಸಿದ ಜಲಾನಯನ ಪ್ರದೇಶ ಅಯ್ಕೆ ಮಾಡಿ ಉತ್ಪಾದನೆಯನ್ನು ಕೈಗೊಳ್ಳುವುದು.

ಪ್ರಮಾಣಿತ ಬೀಜೋತ್ಪಾದನಾ ಯೋಜನೆಯಡಿಯಲ್ಲಿ ಉತ್ಪಾದಿಸಲು ಉದ್ದೇಶಿಸಿರುವ ತಳಿಗಳು ಇತ್ತೀಚಿನ ತಳಿಗಳಾಗಿರಬೇಕು. ಕಡ್ಡಾಯವಾಗಿ 10 ವರ್ಷದೊಳಗಿನ ಹಾಗೂ ನೊಂದಾಯಿತ ತಳಿಗಳಾಗಿದ್ದು, ಪ್ರಮಾಣೀಕರಣಗೊಂಡಿರಬೇಕು, ಪ್ರತಿ ಕ್ವಿಂಟಾಲಿಗೆ ನೀಡುವ ಸಹಾಯಧನವಾದ ರೂ.1000/–ಗಳಲ್ಲಿ ರೂ.750/–ಗಳನ್ನು ರೈತರಿಗೆ ಹಾಗೂ ರೂ.250/–ಗಳನ್ನು ಬೀಜೋತ್ಪಾದನಾ ಸಂಸ್ಥೆಗಳಿಗೆ ಪ್ರೋತ್ಸಾಹಧನವಾಗಿ ನೀಡಲಾಗುವುದು. 5 ವರ್ಷದೊಳಗಿನ ತಳಿಗಳಿಗೆ ರೂ.100/–ಹೆಚ್ಚುವರಿ ನೆರವನ್ನು ನೀಡಲಾಗುವುದು(ರೂ.825/–+275/–).

### 3. ಪ್ರಮಾಣಿತ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ

ಪ್ರಮಾಣಿತ ಬಿತ್ತನೆ ಬೀಜದ ಬಳಕೆಯನ್ನು ಹೆಚ್ಚು ಪ್ರಚಾರ ಪಡಿಸುವ ಸಲುವಾಗಿ ರೈತರು ಖರೀದಿಸುವ ಪ್ರತಿ ಕ್ವಿಂಟಾಲ್ ಪ್ರಮಾಣಿತ ಬೀಜಕ್ಕೆ ಬೀಜದ ಶೇ.50ರಷ್ಟು ದರ ಅಥವಾ ಗರಿಷ್ಠ ರೂ.1800/– ಗಳ ಸಹಾಯ ಧನವನ್ನು(ನೆಲಗಡಲೆ ತಳಿಗೆ) ಮತ್ತು ಗರಿಷ್ಠ ರೂ.2000/– ಗಳ ಸಹಾಯ ಧನವನ್ನು (ಸೋಯಾಬೀನ್ ತಳಿಗೆ)

ನೀಡಲಾಗುವುದು. ಹೈಬ್ರಿಡ್ ತಳಿಗಳಿಗೆ ಶೇ. 50ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ.5000/-ಕ್ಕೆ ಮೀರದಂತೆ ವಿತರಿಸುವುದು.

ಪ್ರಮಾಣಿತ ಬಿತ್ತನೆ ಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 15 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು.

**4.ಪೂರಕ ಸೌಲಭ್ಯ**

ಈ ಅನುದಾನವನ್ನು ಬೀಜೋತ್ಪಾದನಾ ಸಂಸ್ಥೆಗಳ ಬಿತ್ತನೆ ಬೀಜಗಳ ದಾಸ್ತಾನು ಮತ್ತು ಸಂಸ್ಕರಣೆಗೆ ಅಗತ್ಯವಾದ ಸೌಲಭ್ಯಕ್ಕಾಗಿ ನೀಡಬಹುದಾಗಿರುತ್ತದೆ. ರಾಜ್ಯ ಮಟ್ಟದ ಸಮಿತಿ ಸಭೆಯ ನಿರ್ಣಯದಂತೆ ಸದರಿ ಅನುದಾನವನ್ನು ಕೆ.ಎಸ್.ಎಸ್.ಸಿ ರವರಿಗೆ ಗೋದಾಮು ನಿರ್ಮಾಣ/ಅಭಿವೃದ್ಧಿಪಡಿಸಲು ಪೂರಕ ಸೌಲಭ್ಯ ಕಾರ್ಯಕ್ರಮಕ್ಕೆ ನೀಡಲಾಗುವುದು.

**II <u>ಪ್ರಾತ್ಯಕ್ಷಿಕೆಗಳು:</u>**

**ಸೂಚನೆ: ಪ್ರಾತ್ಯಕ್ಷಿಕೆಗಳಿಗೆ 15 ವರ್ಷಗಳ ಒಳಗಿನ ತಳಿ/ಸಂಕರಣಗಳನ್ನು ಬಳಸಬಹುದಾಗಿದೆ.**

**5. ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳು**

ನೆಲಗಡಲೆ **ಬೆಳೆಯಲ್ಲಿ ಆಧುನಿಕ ತಾಂತ್ರಿಕತೆಗಳ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳು:**

ನೂತನ ಹಾಗೂ ಸುಧಾರಿತ ಕೃಷಿ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಬೆಳೆ ಉತ್ಪಾದನೆಯನ್ನು ಹೆಚ್ಚಿಸುವ ರೈತರಿಗೆ ನೇರ ಪ್ರೋತ್ಸಾಹಧನ ಒದಗಿಸುವ ಕಾರ್ಯಕ್ರಮದಂತೆ 2017-18 ನೇ ಸಾಲಿನಲ್ಲಿ ನೆಲಗಡಲೆ ಬೆಳೆಯಲ್ಲಿ ತಾಂತ್ರಿಕತೆಗಳ ಅಳವಡಿಕೆಗೆ (ಮಳೆಯಾಶ್ರಿತ ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಎತ್ತರಿಸಿದ ಬದು ನಿರ್ಮಾಣ ಮಾಡುವುದರಿಂದ ಬೆಳೆಗಳಲ್ಲಿ ಬೇರುಗಳ ಉತ್ತಮ ಬೆಳವಣಿಗೆ, ವಿಸ್ತಾರ ಸಾಲು ಮತ್ತು ಹುಸಿ ಬಿಟ್ಟ ಸಾಲು ಪದ್ಧತಿಯಲ್ಲಿ ಬೇಸಾಯ ಕೈಗೊಳ್ಳುವ ಮೂಲಕ ತೇವಾಂಶ ಸಂರಕ್ಷಣೆ, ನೀರು ಬಸಿಯುವಿಕೆ, ಸಾಲುಗಳ ಮಧ್ಯೆ ಗಾಳಿಯಾಡಲು, ಮಣ್ಣು ಗಟ್ಟಿಯಾಗುವುದನ್ನು ತಡೆಗಟ್ಟಲು ಸಹಕಾರಿಯಾಗುವುದಲ್ಲದೆ ಕಳೆ ನಿಯಂತ್ರಣಕ್ಕೂ ಹಾಗೂ ಅಂತರಬೆಳೆ ಬೆಳೆಯಲು) ರೈತರನ್ನು ಪ್ರೋತ್ಸಾಹಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ.

ನೆಲಗಡಲೆ ಬೆಳೆಯಲ್ಲಿ ಒಟ್ಟು 22857 ಹೆಕ್ಟೇರ್ ಪ್ರದೇಶದಲ್ಲಿ ರೂ.799.99 ಲಕ್ಷಗಳ ಅನುದಾನದ ಗುರಿಯೊಂದಿಗೆ ಪ್ರೋತ್ಸಾಹಧನವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕಾರ್ಯಕ್ರಮ ಆಯೋಜಿಸಲಾಗಿದೆ. ಜಿಲ್ಲಾವಾರು ಪ್ರಾತ್ಯಕ್ಷಿಕೆಗಳ ಗುರಿಯನ್ನು ಅನುಬಂಧದಲ್ಲಿ ನೀಡಲಾಗಿದ್ದು, ರೈತರಿಗೆ ನೇರ ಪ್ರೋತ್ಸಾಹಧನ ಒದಗಿಸಲು ಸೂಕ್ತ ಮಾರ್ಗದರ್ಶನಗಳನ್ನು ಅನುಮೋದನೆಯ ನಂತರ ಕಳುಹಿಸಲಾಗುವುದು. DBT(ನೇರ ಸೌಲಭ್ಯ ವರ್ಗಾವಣೆ) ಕುರಿತಂತೆ ಮಾರ್ಗಸೂಚಿಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು. ಸಕಾಲದಲ್ಲಿ ರೈತರ ಆಯ್ಕೆ ಮತ್ತು ಪ್ರಾತ್ಯಕ್ಷಿಕೆಗಳನ್ನು ತಾಂತ್ರಿಕ ಪ್ರೇರಕರ ಮೂಲಕ ಆಯೋಜಿಸಲು ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ತಿಳಿಸಿದೆ.

ಸೂಚನೆ: ನೆಲಗಡಲೆ ಪ್ರಾತ್ಯಕ್ಷಿಕೆ ಕಾರ್ಯಕ್ರಮದಡಿ ಪರಿಕರ ವಿತರಣೆಗೆ ಅವಕಾಶವಿರುವುದಿಲ್ಲ

**ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳು**(ಸೂರ್ಯಕಾಂತಿ, ಸೋಯಾಅವರೆ, ಮತ್ತು ಇತರೆ ಎಣ್ಣೆಕಾಳುಗಳು ಕುಸುಬೆ,ಎಳ್ಳು,ಹುಚ್ಚೆಳ್ಳುಹರಳು,ಅಗಸೆ,ಸಾಸಿವೆ)

ಕೃಷಿ ವಿಶ್ವವಿದ್ಯಾಲಯವು ಹೊರತಂದಿರುವ ನೂತನ ತಾಂತ್ರಿಕತೆಯನ್ನು ಪ್ರಾತ್ಯಕ್ಷಿಕೆಗಳಲ್ಲಿ ಅಳವಡಿಸಿ ಎಣ್ಣೆಕಾಳು ಉತ್ಪಾದನೆಯನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ಸೋಯಾಅವರೆ, ಸೂರ್ಯಕಾಂತಿ ಮತ್ತು ಕುಸುಬೆ ಬೆಳೆಗಳಿಗಾಗಿ 10 ಹೆ. ತಾಕನ್ನು ಒಂದೇ ಕಡೆ ಬರುವಂತೆ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಯನ್ನು ರೈತ ಜಮೀನುಗಳಲ್ಲಿ ಏರ್ಪಡಿಸಬೇಕಾಗಿರುತ್ತದೆ. ಈ ಪ್ರಾತ್ಯಕ್ಷಿಕೆಗಳಲ್ಲಿ ಖಾಸಗಿ/ಸಾರ್ವಜನಿಕ/ಸಂಕರಣ ತಳಿಗಳನ್ನು ಉಪಯೋಗಿಸಬೇಕಾಗಿರುತ್ತದೆ. ಈ ಪ್ರಾತ್ಯಕ್ಷಿಕೆಗಳಿಗೆ ಅಗತ್ಯವಾದ ಪರಿಕರಗಳನ್ನು ರೈತರಿಗೆ ಶೇ.50 ರಿಯಾಯತಿ ದರದಲ್ಲಿ ಆಯಾ ಬೆಳೆಗಳಿಗೆ ನಿಗದಿಪಡಿಸಿದ ಗರಿಷ್ಠ ಮೊತ್ತಕ್ಕೆ ಮೀರದಂತೆ ಒದಗಿಸಲಾಗುವುದು. ಕೃಷಿ ವಿಶ್ವವಿದ್ಯಾಲಯ/ ಕೃಷಿ

ವಿಜ್ಞಾನ ಕೇಂದ್ರಗಳ ನೆರವನ್ನು ಈ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ಪಡೆಯುವುದು. ನೀರಾವರಿ ಪ್ರದೇಶಗಳಲ್ಲಿ ಬೆಳೆ ಪರಿವರ್ತನೆಯಾಗಿ ಭತ್ತದ ಬೆಳೆಯ ಬದಲಾಗಿ ಸೂರ್ಯಕಾಂತಿ, ಇತರೆ ಎಣ್ಣೆಕಾಳುಗಳು ಬೆಳೆಗಳನ್ನು ಬೆಳೆಯಲು ಹೆಚ್ಚಿನ ಒತ್ತನ್ನು ನೀಡುವುದು. ಪ್ರತಿ ಪ್ರಾತ್ಯಕ್ಷತೆಯ ಶೇಕಡಾ 10 ಭಾಗವನ್ನು ಪ್ರಾತ್ಯಕ್ಷತೆಯ ನಾಮಫಲಕಕ್ಕಾಗಿ ಉಪಯೋಗಿಸುವುದು. ಪ್ರಾತ್ಯಕ್ಷಿಕೆ ಕೈಗೊಂಡ ಕ್ಷೇತ್ರಗಳ GPS co-ordinate ದಾಖಲಿಸುವುದು ಹಾಗೂ ಪ್ರಾತ್ಯಕ್ಷಿಕೆ ಏರ್ಪಡಿಸಲು ಆತ್ಮ ಯೋಜನೆಯ ಸಿಬ್ಬಂದಿಯ ನೆರವನ್ನು ಪಡೆದುಕೊಳ್ಳುವುದು.

| ಕ್ರ ಸಂ. | ಬೆಳೆ | ಪರಿಕರಗಳು | ಶೇ.50 ರಿಯಾಯಿತಿ ಯಲ್ಲಿ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ |
|---|---|---|---|
| 1 | ಸೂರ್ಯಕಾಂತಿ | ಬಿತ್ತನೆ ಬೀಜ, ಸಾವಯವ ಗೊಬ್ಬರ, ಪಿ.ಎಸ್.ಬಿ., ಎನ್.ಪಿ.ವಿ., ಜಿಪ್ಸಂ, ಬೋರಾನ್/ ಸತುವಿನ ಸಲ್ಫೇಟ್, ಬೀಜೋಪಚಾರ ಔಷಧಿ, ಬೇವಿನ ಮೂಲದ ಪೀಡೆನಾಶಕಗಳು | 4000/- |
| 2 | ಸೋಯಾಅವರೆ | ಬಿತ್ತನೆ ಬೀಜ, ಸಾವಯವ ಗೊಬ್ಬರ, ರೈಜೋಬಿಯಂ, ಪಿ.ಎಸ್.ಬಿ., ಟ್ರೈಕೋಡರ್ಮ (ದ್ರವ/ಪುಡಿ), ಸತುವಿನ ಸಲ್ಫೇಟ್, ಜಿಪ್ಸಂ, ಬೇವು ಮೂಲದ ಕೀಟನಾಶಕ, ಮತ್ತು ಸಸ್ಯ ಸಂರಕ್ಷಣಾ ಔಷಧಿ(ಅವಶ್ಯಕತೆ ಇದ್ದಲ್ಲಿ ಮಾತ್ರ), ಬೀಜೋಪಚಾರ ಔಷಧಿ | 4500/- |
| 3 | ಇತರೆ ಎಣ್ಣೆಕಾಳುಗಳು ಕುಸುಬೆ,ಎಳ್ಳು,ಹುಚ್ಚೆಳ್ಳುಹರಳು,ಅಗಸೆ,ಸಾಸಿವೆ | ಬಿತ್ತನೆ ಬೀಜ, ಸಾವಯವ ಗೊಬ್ಬರ, ರೈಜೋಬಿಯಂ, ಪಿ.ಎಸ್.ಬಿ., ಟ್ರೈಕೋಡರ್ಮ (ದ್ರವ/ಪುಡಿ), ಸತುವಿನ ಸಲ್ಫೇಟ್, ಜಿಪ್ಸಂ, ಬೇವು ಮೂಲದ ಕೀಟನಾಶಕ, ಮತ್ತು ಸಸ್ಯ ಸಂರಕ್ಷಣಾ ಔಷಧಿ(ಅವಶ್ಯಕತೆ ಇದ್ದಲ್ಲಿ ಮಾತ್ರ), ಬೀಜೋಪಚಾರ ಔಷಧಿ | 3000/- |

ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವಾಗ ನಿಗದಿಪಡಿಸಿದ ಪರಿಕರಗಳನ್ನು ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ವಿತರಿಸುವುದು ಹಾಗೂ ಪ್ರತಿ ಹೆಕ್ಟೇರಿಗೆ ನಿಗದಿಪಡಿಸಿದ ಗರಿಷ್ಠ ಮೊತ್ತ ಮೀರದಂತೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಮುಂದುವರೆದು, ಉಲ್ಲೇಖ-3ರ ಪತ್ರದಲ್ಲಿ NMOOP ಯೋಜನೆಯಡಿ ಸೂರ್ಯಕಾಂತಿ, ಸಾಸಿವೆ ಮತ್ತು ಹುಚ್ಚೆಳ್ಳು ಬೆಳೆಗಳಲ್ಲಿ ಕೈಗೊಳ್ಳಲಾಗುವ ಪ್ರಾತ್ಯಕ್ಷಿಕೆಗಳಲ್ಲಿ ಜೇನಿನ ಗೂಡನ್ನು (Bee coloney) ಬಾಡಿಗೆ ಆಧಾರದ ಮೇಲೆ ಪಡೆದು ಬೆಳೆಯ ಪ್ರಾತ್ಯಕ್ಷಿಕೆ ಪ್ರದೇಶದಲ್ಲಿರಿಸಿ ಉತ್ತಮ ಪರಾಗಸ್ಪರ್ಶಕ್ಕೆ ಅನುವು ಮಾಡಿಕೊಡಲು ಪ್ರತಿ ಹೆಕ್ಟೇರಿಗೆ ರೂ.2000/-ಗಳ ಸಹಾಯನುದಾನವನ್ನು ಪಡೆಯಲು ಅವಕಾಶಗಳಿರುತ್ತದೆ. Bee coloney ಬಾಡಿಗೆ ದರವು ರೂ.2000/- ಗಳನ್ನು ಮೀರಿದಲ್ಲಿ ಆ ಮೊತ್ತವನ್ನು ರೈತರೇ ನೇರವಾಗಿ ಭರಿಸಬೇಕಾಗುತ್ತದೆ.

ಆಸಕ್ತ ರೈತರಿಗೆ National Bee Board ನವದೆಹಲಿ ಇಲ್ಲಿ ತರಬೇತಿಯನ್ನು ನೀಡಲಾಗುವುದು ಎಂಬುದಾಗಿ ತಿಳಿಸಲಾಗಿದೆ.

6. ಎಫ್.ಎಫ್.ಎಸ್.ಮಾದರಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ /ಸಮಗ್ರ ತಾಂತ್ರಿಕತೆ ಪ್ರಾತ್ಯಕ್ಷಿಕೆ

ನೆಲಗಡಲೆ, ಸೋಯಾಅವರೆ ಮತ್ತು ಸೂರ್ಯಕಾಂತಿ ಬೆಳೆಗಳಲ್ಲಿ ಸಮಗ್ರಪೀಡೆ ನಿರ್ವಹಣೆ/ಸಮಗ್ರ ತಾಂತ್ರಿಕತೆ ಪ್ರಾತ್ಯಕ್ಷಿಕೆಯನ್ನು ಎಫ್.ಎಫ್.ಎಸ್. ಮಾದರಿಯಲ್ಲಿ ಅಳವಡಿಸಲಾಗಿದೆ. ಸದರಿ ಘಟಕದಡಿಯಲ್ಲಿ ಪ್ರತಿ ಪ್ರಾತ್ಯಕ್ಷಿಕೆಗೆ ರೂ.26700/- ಗಳನ್ನು ಕಾದಿರಿಸಲಾಗಿದೆ.

ಎಫ್.ಎಫ್.ಎಸ್. ಮಾದರಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ /ಸಮಗ್ರ ತಾಂತ್ರಿಕತೆ ಪ್ರಾತ್ಯಕ್ಷಿಕೆ ತರಬೇತಿ ಕಾರ್ಯಕ್ರಮದ ಸಹಾಯಧನದ ವಿವರ:

| ಕ್ರ. ಸಂ. | ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1) | ತರಬೇತಿ ಸಾಮಾಗ್ರಿಗಳು ಸಮಗ್ರ ಪೀಡೆ ನಿರ್ವಹಣಾ ಕಿರು ಚೀಲ ರೂ.150/- ರಂತೆ - 30 ಜನ ರೈತರಿಗೆ | 4500/- |
| 2) | ಸಮಗ್ರ ಪೀಡೆ ನಿರ್ವಹಣೆ ಕೈಪಿಡಿ ಹಂಚಿಕೆ ರೂ.100/- ರಂತೆ -30 ಜನ ರೈತರಿಗೆ | 3000/- |
| 3) | ಮುಂಜಾಗ್ರತಾ ಕ್ರಮವಾಗಿ ಕೀಟ/ರೋಗಗಳ ಹತೋಟಿಗಾಗಿ ಮೋಹಕ ಬಲೆ, ಬೀಜೋಪಚಾರ ಹಾಗೂ ಸಿಂಪರಣಾ ಔಷಧಿ ಹಾಗೂ ಇತರೆ ಸಾಮಗ್ರಿಗಳಿಗಾಗಿ | 2,000/- |
| 4) | ಸಾದಿಲ್ವಾರು ವೆಚ್ಚ(ಎಫ್.ಎಫ್.ಎಸ್. ಪ್ರಾತ್ಯಕ್ಷಿಕೆ ಉದ್ಘಾಟನೆಗೆ ಬ್ಯಾನರ್) | 1,800/- |
| 5) | ಸಾದಿಲ್ವಾರು ವೆಚ್ಚ(ವಾಹನ ಬಾಡಿಗೆ)/ಇಂಧನ ವೆಚ್ಚ | 2,500/- |
| 6) | ಚಹಾ/ಲಘುಉಪಹಾರ - ಪ್ರತಿ ದಿನಕ್ಕೆ ತಲಾ ರೂ.600/-ರಂತೆ -14 ಅಧಿವೇಶನಗಳಿಗೆ (600x14) | 8,400/- |
| 7) | ಸಮಗ್ರ ಪೀಡೆ ನಿರ್ವಹಣಾ ಕ್ಷೇತ್ರೋತ್ಸವ ಏರ್ಪಡಿಸುವುದು -<br>1. ಚಹಾ/ಲಘುಉಪಹಾರ 2. ಸಾದಿಲ್ವಾರು ವೆಚ್ಚ, ಆಸನ ವ್ಯವಸ್ಥೆ, ಶ್ಯಾಮಿಯಾನ ಇತ್ಯಾದಿ | 1500/- |
| 8) | 2 ಫೆಸಿಲಿಟೇಟರ್/ತರಬೇತುದಾರರಿಗೆ ಸಂಭಾವನೆ@ ರೂ.1500/- ಪ್ರತಿ ತರಬೇತುದಾರರಿಗೆ | 3,000/- |
| | **ಸಮಗ್ರ ಪೀಡೆ ನಿರ್ವಹಣೆ ಪ್ರಾತ್ಯಕ್ಷಿಕೆ/ತರಬೇತಿ ಕಾರ್ಯಕ್ರಮದ ಒಟ್ಟು ವೆಚ್ಚ (30 ಜನ ರೈತರಿಗೆ)** | **26,700/-** |

7. ರೈತರ ತರಬೇತಿ ಕಾರ್ಯಕ್ರಮ

ಎಣ್ಣೆಕಾಳು ಬೆಳೆಗಳ ಉತ್ಪಾದನಾ ತಾಂತ್ರಿಕತೆಯ ಬಗ್ಗೆ ರೈತರು ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳುವ ಸಲುವಾಗಿ ಪ್ರತಿ ತರಬೇತಿಗೆ 24,000/- ರೂ.ಗಳ ಅನುದಾನವನ್ನು ನೀಡಲಾಗಿದೆ. ಎರಡು ದಿನದ ತರಬೇತಿಗಾಗಿ ತಲಾ 30 ರೈತರು ಭಾಗವಹಿಸತಕ್ಕದ್ದು. ಘಟಕವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ವಿವರಗಳು | ಘಟಕವಾರು ವೆಚ್ಚ (ರೂ.ಗಳಲ್ಲಿ) |
|---|---|---|
| 1. | ತರಬೇತಿ ಸಾಮಾಗ್ರಿಗಳು/ಲೇಖನ ಸಾಮಗ್ರಿ/ಸ್ಥಳದ ಬಾಡಿಗೆ/ ಬೋಧನಾ ಸಾಮಗ್ರಿ ವೆಚ್ಚ ಇತ್ಯಾದಿ | 2500-00 |
| 2. | ಪ್ರಯಾಣ ವೆಚ್ಚ/ತಂಗುವಿಕೆ ವೆಚ್ಚ/ಸಾರಿಗೆ ವ್ಯವಸ್ಥೆ | 4500-00 |
| 3. | ವಿಷಯತಜ್ಞರು/ ವಿಜ್ಞಾನಿಗಳಿಗೆ ಗೌರವಧನ (ರೂ.250 ರಂತೆ 8 ಮಂದಿಗೆ) | 2000-00 |
| 4. | ಲಘು ಉಪಹಾರ ಮತ್ತು ಊಟ ರೂ.250/- ರಂತೆ 30 ರೈತರಿಗೆ (250x30x2) | 15000-00 |
| | **ಒಟ್ಟು** | **24000-00** |

8. ವಿಸ್ತರಣಾ ಅಧಿಕಾರಿಗಳ/ಪರಿಕರ ಮಾರಾಟಗಾರರ ತರಬೇತಿ

ಎಣ್ಣೆಕಾಳು ಬೆಳೆಗಳ ಅಭಿವೃದ್ಧಿ ಹಾಗೂ ಹೊಸ ತಾಂತ್ರಿಕತೆಗಳ ಬಗ್ಗೆ ಇಲಾಖಾ ಅಧಿಕಾರಿ/ಪರಿಕರ ಮಾರಾಟಗಾರರಿಗೆ ಎರಡು ದಿನದ ತರಬೇತಿಯನ್ನು 20 ಮಂದಿಗೆ ಬೆಳೆ ಹಂಗಾಮಿನ ಅವಧಿಯಲ್ಲಿ ಏರ್ಪಡಿಸಬೇಕಾಗಿರುತ್ತದೆ. ಇದಕ್ಕಾಗಿ ಪ್ರತಿ ತರಬೇತಿಗೆ ರೂ.36000/- ಗಳ ಅನುದಾನವನ್ನು ಕಲ್ಪಿಸಿದ್ದು ಘಟಕವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ವಿವರಗಳು | ಘಟಕವಾರು ವೆಚ್ಚ (ರೂ.ಗಳಲ್ಲಿ) |
|---|---|---|
| 1 | ತರಬೇತಿ/ಲೇಖನ ಸಾಮಗ್ರಿ, ಸ್ಥಳದ ಬಾಡಿಗೆ ಮತ್ತು ಬೋಧನಾ ಸಾಮಗ್ರಿ ವೆಚ್ಚ ಇತ್ಯಾದಿ | 5000.00 |
| 2 | ವಾಸ್ತವ್ಯ/ಪ್ರಯಾಣ/ಸಾರಿಗೆ/ಕ್ಷೇತ್ರ ಭೇಟಿ/ ಇತ್ಯಾದಿ | 15000.00 |
| 3 | ಉಪನ್ಯಾಸಕರಿಗೆ/ವಿಜ್ಞಾನಿಗಳಿಗೆ ಗೌರವಧನ ಪ್ರತಿ ಉಪನ್ಯಾಸಕ್ಕೆ ರೂ.500/-ಗಳಂತೆ(8 ಉಪನ್ಯಾಸಗಳಿಗೆ) | 4000.00 |
| 4 | ಊಟದ ವೆಚ್ಚ 20 ಅಧಿಕಾರಿಗಳಿಗೆ 2 ದಿನಗಳಿಗೆ ಪ್ರತಿ ಒಬ್ಬರಿಗೆ ಪ್ರತಿ ದಿನಕ್ಕೆ ರೂ. 300/-ರಂತೆ (300X20 X 2) | 12000.00 |
| | ಒಟ್ಟು | 36000.00 |

**III. ಬೀಜೇತರ ಘಟಕಗಳು (ಉತ್ಪಾದನಾ ಪರಿಕರಗಳು)**

**9. ಜಿಪ್ಸಂ – ಪೈರೇಟ್ಸ್/ಲೈಮಿಂಗ್/ಡೋಲೊಮೈಟ್/ಸಿಂಗಲ್ ಸೂಪರ್ ಫಾಸ್ಫೇಟ್ ವಿತರಣೆ**

ಈ ಕಾರ್ಯಕ್ರಮದ ಮೂಲಕ ಎಣ್ಣೆಕಾಳು ಬೆಳೆಗಳಲ್ಲಿ ಅದರಲ್ಲೂ ಮುಖ್ಯವಾಗಿ ನೆಲಗಡಲೆ ಬೆಳೆಗೆ ಜಿಪ್ಸಂ ಲವಣವನ್ನು ಸರಬರಾಜು ಮಾಡಲಾಗುವುದು. ಜಿಪ್ಸಂ ಸರಬರಾಜಿನಲ್ಲಿ ಸಾಗಾಣಿಕೆ ವೆಚ್ಚವು ಅತಿ ಹೆಚ್ಚಾಗಿರುವುದರಿಂದ ಸಾಗಾಣಿಕೆ ವೆಚ್ಚದ ಭಾರವನ್ನು ರೈತರಿಗೆ ಕಡಿಮೆ ಮಾಡಲು ಈ ಪರಿಕರದ ಶೇ.50ರಷ್ಟು ಬೆಲೆ (ಸಾಗಾಣಿಕೆ ವೆಚ್ಚವೂ ಸೇರಿ) ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.750/-ಗಳ ಸಹಾಯಧನವನ್ನು ಒದಗಿಸಲಾಗುವುದು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ 10ಹೆ ವಿಸ್ತೀರ್ಣ ಸಾಧ್ಯವಾದ ಮಟ್ಟಿಗೆ ಒಂದೇ ತಾಕಿನಲ್ಲಿ ಬರುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

**10. ರೈಜೋಬಿಯಂ ಜೀವಾಣು ಹಾಗೂ ಪಿ.ಎಸ್.ಬಿ.ಸರಬರಾಜು**

ನೆಲಗಡಲೆ ಹಾಗೂ ಸೋಯಾಅವರೆಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ರೈಜೋಬಿಯಂ ಹಾಗೂ ಎಣ್ಣೆಕಾಳು ಬೆಳೆಗಳಿಗೆ ಪಿ.ಎಸ್.ಬಿ. ಜೀವಾಣುಗಳು ಅಗ್ಗದ ಪರಿಕರವಾಗಿರುತ್ತದೆ. ರೈಜೋಬಿಯಂ ವಾತಾವರಣದಲ್ಲಿರುವ ಸಾರಜನಕವನ್ನು ಹಾಗೂ ಪಿ.ಎಸ್.ಬಿ. ಜೀವಾಣು ಭೂಮಿಯಲ್ಲಿರುವ ರಂಜಕವನ್ನು ಕರಗದ ಸ್ಥಿತಿಯಿಂದ ಕರಗುವ ಸ್ಥಿತಿಗೆ ತರಲು ಸಹಾಯಮಾಡುತ್ತವೆ. ಇದರಿಂದ ಇಳುವರಿಯೂ ಸಹ ಹೆಚ್ಚುತ್ತದೆ. ಈ ಜೀವಾಣುಗಳಿಗೆ ಶೇ.50ರ ಬೆಲೆಯ ಅಥವಾ ಹೆಕ್ಟೇರ್ ಒಂದಕ್ಕೆ ಗರಿಷ್ಠ 300/- ರೂ.ಗಳ ಸಹಾಯಧನವನ್ನು ನೀಡಿ ವಿತರಿಸುವುದು.

**11. ರಾಸಾಯನಿಕ ಪೀಡೆನಾಶಕ/ಶಿಲೀಂದ್ರನಾಶಕ/ಬಯೋ(ಜೈವಿಕ)ಪೆಸ್ಟಿಸೈಡ್/ಜೈವಿಕನಿಯಂತ್ರಣಕಾರಕಗಳು/ಕಳೆನಾಶಕ/ ಲಘುಪೋಷಕಾಂಶಗಳ ಸರಬರಾಜು.**

ರಾಸಾಯನಿಕ ಪೀಡೆನಾಶಕ/ಶಿಲೀಂದ್ರನಾಶಕ/ಬಯೋ(ಜೈವಿಕ)ಪೆಸ್ಟಿಸೈಡ್/ಬಯೋಏಜೆಂಟ್ಸ್/ಕಳೆನಾಶಕ/ಲಘುಪೋಷಕಾಂಶಗಳ ಸರಬರಾಜು ಔಷಧಿಗಳನ್ನು ಸರಬರಾಜು ಮಾಡಲು ಶೇ.50 ಸಹಾಯಧನದಲ್ಲಿ ಹೆ.ಗೆ ಗರಿಷ್ಠ ರೂ.500/-ಗಳನ್ನು ಮೀರದಂತೆ ಸಹಾಯಧನವನ್ನು ಕಲ್ಪಿಸಲಾಗಿದೆ.

**12.. ತುಂತುರು ನೀರಾವರಿ**

ಸದರಿ ಘಟಕವನ್ನು NMSA ಮಾರ್ಗಸೂಚಿಯಂತೆ(ಕೇಂದ್ರ ಸರ್ಕಾರದ) ಅನುಷ್ಠಾನಗೊಳಿಸುವುದು. ತುಂತುರು ನೀರಾವರಿ ಘಟಕದಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ವಲಯ ಯೋಜನೆಗಳ ಅನುದಾನವನ್ನು ಸಮನ್ವಯಗೊಳಿಸಬಹುದಾಗಿದೆ.

**13. ಅಧ್ಯಯನ ಪ್ರವಾಸ**

ವಿಸ್ತರಣಾ ಕಾರ್ಯಕ್ರಮವಯ ನೋಡಿ ತಿಳಿ ತತ್ವದ ಮೇಲೆ ಆಧಾರಿತವಾಗಿದ್ದು, ರೈತರು ಬೇರೆ ರೈತರ ಕ್ಷೇತ್ರಗಳಲ್ಲಿ ಅಳವಡಿಸಲಾದ ಹೊಸ ತಾಂತ್ರಿಕತೆಗಳನ್ನು ನೋಡಿ ವಿಚಾರ ವಿನಿಮಯ ಮಾಡಿಕೊಂಡು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲು ಅಧ್ಯಯನ ಪ್ರವಾಸವು ಸಹಕಾರಿಯಾಗಿದೆ. 2017-18ನೇ ಸಾಲಿನ ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನ ಯೋಜನೆಯಡಿ ಅಧ್ಯಯನ ಪ್ರವಾಸಕ್ಕಾಗಿ ರೂ.100.00ಲಕ್ಷಗಳನ್ನು ಮೀಸಲಿಡಲಾಗಿರುತ್ತದೆ. ನಿಗದಿಪಡಿಸಿದ ಕಾರ್ಯಕ್ರಮದಂತೆ ಪ್ರವಾಸವನ್ನು 10 ದಿನಗಳಿಗೆ 50 ಜನ ರೈತರಿಗೆ ಸೀಮಿತಗೊಳಿಸುವುದು (ರೂ.1000/- ಪ್ರತಿ ರೈತರಿಗೆ/ಪ್ರತಿ ದಿನಕ್ಕೆ ಆತ್ಮ ಮಾರ್ಗಸೂಚಿಯಂತೆ). ಹೊಸ ತಾಂತ್ರಿಕತೆ ಬಳಸಿ ಹೆಚ್ಚಿನ ಉತ್ಪಾದನೆ ಸಾಧಿಸುವ ಹೊರರಾಜ್ಯಗಳಿಗೆ ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

**ಸೂಚನೆ:**

- ಕೇಂದ್ರ ಸರ್ಕಾರದ ಎನ್.ಎಮ್.ಓ.ಓ.ಪಿ. ಕಾರ್ಯಕಾರಿ ಮಾರ್ಗಸೂಚಿ. ಅನ್ವಯ ಎಣ್ಣೆಕಾಳು ಯೋಜನೆಯಡಿ ಬೀಜೇತರ ಘಟಕದಿಂದ ಬೀಜೇತರ ಘಟಕಗಳಿಗೆ ಶೇ. 20 ರಂತೆ ಮಾತ್ರ ಅಂತರಘಟಕ ಬದಲಾವಣೆಗೆ ಅನುಮೋದನೆ ನೀಡಲು ಅವಕಾಶವಿರುತ್ತದೆ(ನೆಲಗಡಲೆ ಪ್ರಾತ್ಯಕ್ಷಿಕೆ ಹೊರತುಪಡಿಸಿ). ಅಂತರ ಘಟಕ ಬದಲಾವಣೆ ಪ್ರಸ್ತಾವನೆಗೆ ಕೇಂದ್ರ ಕಚೇರಿಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸುವುದು.
- ಪ್ರಾತ್ಯಕ್ಷಿಕೆಗಳಲ್ಲಿ ಒಂದು ಬೆಳೆಯಿಂದ ಬೇರೆ ಬೆಳೆಗೆ ಅಂತರಘಟಕ ಬದಲಾವಣೆಗೆ ಅವಕಾಶವಿದ್ದು(ನೆಲಗಡಲೆ ಪ್ರಾತ್ಯಕ್ಷಿಕೆ ಹೊರತುಪಡಿಸಿ) ಕೇಂದ್ರ ಕಚೇರಿಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸುವುದು.

**ಕೃಷಿ ನಿರ್ದೇಶಕರು**

2017-18ನೇ ಸಾಲಿನ ಎನ್.ಎಂ.ಓ.ಓ.ಪಿ ಎಣ್ಣೆಕಾಳು ಬೆಳೆಗಳ ಜಿಲ್ಲಾವಾರು ಕಾರ್ಯಕ್ರಮ (ಲಕ್ಷ ರೂ.ಗಳಲ್ಲಿ)

ಲೆಕ್ಕ ಶೀರ್ಷಿಕೆ:2401-00-114-0-01 (ರಾಜ್ಯವಲಯ)

| ಕ್ರ ಸಂ | ಜಿಲ್ಲೆಗಳು | ತಳಿವರ್ಧಕ ಬೀಜ ಖರೀದಿ(ಕ್ವಿಂ.) | | ಪ್ರಮಾಣಿತ ಬೀಜೋತ್ಪಾದನೆ(ಕ್ವಿಂ.) | | ಪ್ರಮಾಣಿತ ಬೀಜ ವಿತರಣೆ(ಕ್ವಿಂ.) | | | ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ: ನೆಲಗಡಲೆ ರೂ.3500/ಹೆ(DBT) | | ಸೂರ್ಯಕಾಂತಿ-ರೂ 4000/-ಹೆ | | ಸೋಯಾಬೀನ್- ರೂ 4500/-ಹೆ | | ಇತರೆ ಎಣ್ಣೆಕಾಳು ರೂ3000/ಹೆ | | ಒಟ್ಟು ಪ್ರಾತ್ಯಕ್ಷಿಕೆ | |
|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | | ಗುರಿ | | ಗುರಿ | | ಗುರಿ | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 0 | 0.00 | 0 | 0.00 | 400 | 10.00 | 0.00 | 2143 | 75.01 | 0 | 0.00 | 0 | 0.00 | 50 | 1.50 | 2193 | 76.51 |
| 2 | ಬೆಂಗಳೂರು(ನ) | 0 | 0.00 | 0 | 0.00 | 120 | 3.00 | 0.00 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| 3 | ಬೆಂಗಳೂರು(ಗ್ರಾ) | 0 | 0.00 | 0 | 0.00 | 120 | 3.00 | 0.00 | 214 | 7.49 | 0 | 0.00 | 0 | 0.00 | 0 | 0.00 | 214 | 7.49 |
| 4 | ಬೆಳಗಾವಿ | 0 | 0.00 | 1000 | 10.00 | 400 | 10.00 | 0.00 | 2143 | 75.01 | 140 | 5.60 | 898 | 40.41 | 50 | 1.50 | 3231 | 122.52 |
| 5 | ಬಳ್ಳಾರಿ | 0 | 0.00 | 0 | 0.00 | 0 | 0.00 | 0.00 | 1071 | 37.49 | 0 | 0.00 | 0 | 0.00 | 0 | 0.00 | 1071 | 37.49 |
| 6 | ಬೀದರ್ | 0 | 0.00 | 0 | 0.00 | 200 | 5.00 | 0.00 | 0 | 0.00 | 50 | 2.00 | 1884 | 84.78 | 0 | 0.00 | 1934 | 86.78 |
| 7 | ಬಿಜಾಪುರ | 0 | 0.00 | 1000 | 10.00 | 200 | 5.00 | 0.00 | 1286 | 45.01 | 100 | 4.00 | 0 | 0.00 | 0 | 0.00 | 1386 | 49.01 |
| 8 | ಚಾಮರಾಜನಗರ | 0 | 0.00 | 0 | 0.00 | 200 | 5.00 | 0.00 | 429 | 15.02 | 50 | 2.00 | 0 | 0.00 | 0 | 0.00 | 479 | 17.02 |
| 9 | ಚಿಕ್ಕಬಳ್ಳಾಪುರ | 0 | 0.00 | 0 | 0.00 | 600 | 15.00 | 0.00 | 429 | 15.02 | 0 | 0.00 | 0 | 0.00 | 0 | 0.00 | 429 | 15.02 |
| 10 | ಚಿಕ್ಕಮಗಳೂರು | 0 | 0.00 | 0 | 0.00 | 0 | 0.00 | 0.00 | 129 | 4.52 | 20 | 0.80 | 0 | 0.00 | 0 | 0.00 | 149 | 5.32 |
| 11 | ಚಿತ್ರದುರ್ಗ | 0 | 0.00 | 2000 | 20.00 | 400 | 10.00 | 0.00 | 2614 | 91.49 | 100 | 4.00 | 0 | 0.00 | 0 | 0.00 | 2714 | 95.49 |
| 12 | ದಾವಣಗೆರೆ | 0 | 0.00 | 0 | 0.00 | 0 | 0.00 | 0.00 | 1286 | 45.01 | 50 | 2.00 | 0 | 0.00 | 0 | 0.00 | 1336 | 47.01 |
| 13 | ಧಾರವಾಡ | 0 | 0.00 | 1000 | 10.00 | 160 | 4.00 | 0.00 | 1071 | 37.49 | 50 | 2.00 | 200 | 9.00 | 0 | 0.00 | 1321 | 48.49 |
| 14 | ಗದಗ | 0 | 0.00 | 0 | 0.00 | 200 | 5.00 | 0.00 | 1071 | 37.49 | 150 | 6.00 | 0 | 0.00 | 100 | 3.00 | 1321 | 46.49 |
| 15 | ಗುಲ್ಬರ್ಗಾ | 0 | 0.00 | 0 | 0.00 | 0 | 0.00 | 0.00 | 1071 | 37.49 | 100 | 4.00 | 78 | 3.51 | 100 | 3.00 | 1349 | 48.00 |
| 16 | ಹಾಸನ | 0 | 0.00 | 0 | 0.00 | 0 | 0.00 | 0.00 | 214 | 7.49 | 20 | 0.80 | 0 | 0.00 | 0 | 0.00 | 234 | 8.29 |
| 17 | ಹಾವೇರಿ | 0 | 0.00 | 0 | 0.00 | 0 | 0.00 | 0.00 | 1071 | 37.49 | 20 | 0.80 | 100 | 4.50 | 100 | 3.00 | 1291 | 45.79 |
| 18 | ಕೋಲಾರ | 0 | 0.00 | 0 | 0.00 | 200 | 5.00 | 0.00 | 321 | 11.24 | 0 | 0.00 | 0 | 0.00 | 100 | 3.00 | 421 | 14.24 |
| 19 | ಕೊಪ್ಪಳ | 0 | 0.00 | 0 | 0.00 | 200 | 5.00 | 0.00 | 1071 | 37.49 | 200 | 8.00 | 0 | 0.00 | 100 | 3.00 | 1371 | 48.49 |
| 20 | ಮಂಡ್ಯ | 0 | 0.00 | 0 | 0.00 | 0 | 0.00 | 0.00 | 43 | 1.51 | 0 | 0.00 | 0 | 0.00 | 0 | 0.00 | 43 | 1.51 |
| 21 | ಮೈಸೂರು | 0 | 0.00 | 0 | 0.00 | 0 | 0.00 | 0.00 | 429 | 15.02 | 0 | 0.00 | 0 | 0.00 | 0 | 0.00 | 429 | 15.02 |
| 22 | ರಾಯಚೂರು | 0 | 0.00 | 0 | 0.00 | 0 | 0.00 | 0.00 | 1071 | 37.49 | 200 | 8.00 | 0 | 0.00 | 100 | 3.00 | 1371 | 48.49 |
| 23 | ರಾಮನಗರ | 0 | 0.00 | 0 | 0.00 | 0 | 0.00 | 0.00 | 54 | 1.89 | 0 | 0.00 | 0 | 0.00 | 0 | 0.00 | 54 | 1.89 |
| 24 | ಶಿವಮೊಗ್ಗ | 0 | 0.00 | 0 | 0.00 | 0 | 0.00 | 0.00 | 425 | 14.88 | 0 | 0.00 | 0 | 0.00 | 0 | 0.00 | 425 | 14.88 |
| 25 | ತುಮಕೂರು | 0 | 0.00 | 1000 | 10.00 | 200 | 5.00 | 0.00 | 2143 | 75.01 | 0 | 0.00 | 0 | 0.00 | 0 | 0.00 | 2143 | 75.01 |
| 26 | ಉತ್ತರ ಕನ್ನಡ | 0 | 0.00 | 0 | 0.00 | 0 | 0.00 | 0.00 | 107 | 3.75 | 0 | 0.00 | 0 | 0.00 | 0 | 0.00 | 107 | 3.75 |
| 27 | ಉಡುಪಿ | 0 | 0.00 | 0 | 0.00 | 0 | 0.00 | 0.00 | 107 | 3.75 | 0 | 0.00 | 0 | 0.00 | 0 | 0.00 | 107 | 3.75 |
| 28 | ಯಾದಗಿರಿ | 0 | 0.00 | 0 | 0.00 | 0 | 0.00 | 0.00 | 844 | 29.54 | 0 | 0.00 | 0 | 0.00 | 100 | 3.00 | 944 | 32.54 |
| 30 | ಕೇಂದ್ರ ಕಛೇರಿ | 2200 | 250.00 | 0 | 0.00 | 0 | 0.00 | 220.00 | 0 | 0.00 | 0 | 0 | 0 | 0.00 | 0 | 0.00 | 0 | 0.00 |
| | ಒಟ್ಟು | **2200** | **250.00** | **6000** | **60.00** | **3600** | **90.00** | **220.00** | **22857** | **799.99** | 1250 | 50.00 | 3160 | 142.20 | 800 | 24.00 | 28067 | 1016.19 |

2017–18ನೇ ಸಾಲಿ:

ಲೆಕ್ಕ ಶೀರ್ಷಿಕೆ:2401-ಲೆಕ್ಕ ಶೀರ್ಷಿಕೆ:2401–00–114–0–01 (ರಾಜ್ಯವಲಯ)

| ಕ್ರ ಸಂ | ಜಿಲ್ಲೆಗಳು | ಎಫ್.ಎಫ್.ಎಸ್. ಪ್ರಾತ್ಯಕ್ಷಿಕೆ (ಸಂ.) ಪ್ರತಿ ಪ್ರಾತ್ಯಕ್ಷಿಕೆಗೆ ರೂ. 26700/– ಗುರಿ | | ರೈತರ ತರಬೇತಿ (ಸಂ.) ಪ್ರತಿ ತರಬೇತಿಗೆ ರೂ. 24000/– ಗುರಿ | | ಅಧಿಕಾರಿ ತರಬೇತಿ (ಸಂ.) ಪ್ರತಿ ತರಬೇತಿಗೆ ರೂ. 36000/– ಗುರಿ | | ನಿರ್ವಹಣಾ ವೆಚ್ಚ ಮೌಲ್ಯಮಾಪನ ಗುರಿ | ತುಂತುರು ನೀರಾವರಿ(ಎನ್.ಎಂ.ಎಸ್.ಎ ಮಾರ್ಗಸೂಚಿಯಂತೆ) ಗುರಿ | | ಅದ್ಯಯನ ಪ್ರವಾಸ ಗುರಿ | | ಒಟ್ಟು ಗುರಿ ಗುರಿ | |
|---|---|---|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 0 | 0.00 | 1 | 0.24 | 1 | 0.36 | 0.00 | 9 | 0.90 | 1 | 5.00 | 2605 | 93.01 |
| 2 | ಬೆಂಗಳೂರು(ನ) | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 120 | 3.00 |
| 3 | ಬೆಂಗಳೂರು(ಗ್ರಾ) | 0 | 0.00 | 0 | 0.00 | 0 | 0.00 | 0.00 | 0 | 0.00 | 0 | 0.00 | 334 | 10.49 |
| 4 | ಬೆಳಗಾವಿ | 1 | 0.27 | 1 | 0.24 | 1 | 0.36 | 0.00 | 0 | 0.00 | 1 | 5.00 | 4635 | 148.38 |
| 5 | ಬಳ್ಳಾರಿ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 1072 | 42.49 |
| 6 | ಬೀದರ್ | 1 | 0.27 | 0 | 0.00 | 0 | 0.00 | 0.00 | 0 | 0.00 | 1 | 5.00 | 2136 | 97.05 |
| 7 | ಬಿಜಾಪುರ | 0 | 0.00 | 1 | 0.24 | 0 | 0.00 | 0.00 | 0 | 0.00 | 1 | 5.00 | 2588 | 69.25 |
| 8 | ಚಾಮರಾಜನಗರ | 0 | 0.00 | 0 | 0.00 | 0 | 0.00 | 0.00 | 0 | 0.00 | 0 | 0.00 | 679 | 22.02 |
| 9 | ಚಿಕ್ಕಬಳ್ಳಾಪುರ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 1030 | 35.02 |
| 10 | ಚಿಕ್ಕಮಗಳೂರು | 0 | 0.00 | 0 | 0.00 | 0 | 0.00 | 0.00 | 0 | 0.00 | 0 | 0.00 | 149 | 5.32 |
| 11 | ಚಿತ್ರದುರ್ಗ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 5115 | 130.49 |
| 12 | ದಾವಣಗೆರೆ | 0 | 0.00 | 1 | 0.24 | 0 | 0.00 | 0.00 | 0 | 0.00 | 1 | 5.00 | 1338 | 52.25 |
| 13 | ಧಾರವಾಡ | 0 | 0.00 | 1 | 0.24 | 1 | 0.36 | 0.00 | 0 | 0.00 | 1 | 5.00 | 2484 | 68.09 |
| 14 | ಗದಗ | 0 | 0.00 | 1 | 0.24 | 1 | 0.36 | 0.00 | 0 | 0.00 | 1 | 5.00 | 1524 | 57.09 |
| 15 | ಗುಲ್ಬರ್ಗಾ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 1350 | 53.00 |
| 16 | ಹಾಸನ | 0 | 0.00 | 1 | 0.24 | 0 | 0.00 | 0.00 | 0 | 0.00 | 1 | 5.00 | 236 | 13.53 |
| 17 | ಹಾವೇರಿ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 1292 | 50.79 |
| 18 | ಕೋಲಾರ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 622 | 24.24 |
| 19 | ಕೊಪ್ಪಳ | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 1572 | 58.49 |
| 20 | ಮಂಡ್ಯ | 1 | 0.27 | 0 | 0.00 | 0 | 0.00 | 0.00 | 0 | 0.00 | 0 | 0.00 | 44 | 1.77 |
| 21 | ಮೈಸೂರು | 0 | 0.00 | 0 | 0.00 | 0 | 0.00 | 0.00 | 0 | 0.00 | 1 | 5.00 | 430 | 20.02 |
| 22 | ರಾಯಚೂರು | 1 | 0.27 | 1 | 0.24 | 0 | 0.00 | 0.00 | 30 | 3.00 | 1 | 5.00 | 1404 | 56.99 |
| 23 | ರಾಮನಗರ | 0 | 0.00 | 0 | 0.00 | 0 | 0.00 | 0.00 | 20 | 2.00 | 1 | 5.00 | 75 | 8.89 |
| 24 | ಶಿವಮೊಗ್ಗ | 0 | 0.00 | 0 | 0.00 | 0 | 0.00 | 0.00 | 10 | 1.00 | 0 | 0.00 | 435 | 15.88 |
| 25 | ತುಮಕೂರು | 1 | 0.27 | 0 | 0.00 | 1 | 0.36 | 0.00 | 30 | 3.00 | 1 | 5.00 | 3376 | 98.63 |
| 26 | ಉತ್ತರ ಕನ್ನಡ | 0 | 0.00 | 1 | 0.24 | 0 | 0.00 | 0.00 | 10 | 1.00 | 0 | 0.00 | 118 | 4.99 |
| 27 | ಉಡುಪಿ | 0 | 0.00 | 0 | 0.00 | 0 | 0.00 | 0.00 | 10 | 1.00 | 0 | 0.00 | 117 | 4.75 |
| 28 | ಯಾದಗಿರಿ | 0 | 0.00 | 1 | 0.24 | 0 | 0.00 | 0.00 | 30 | 3.02 | 1 | 5.00 | 976 | 40.80 |
| 30 | ಕೇಂದ್ರ ಕಛೇರಿ | 0.00 | 0.00 | 0 | 0.00 | 0 | 0.00 | 24.68 | 0.00 | 0.00 | 0 | 0.00 | 2200 | 494.68 |
| | **ಒಟ್ಟು** | **5.00** | **1.34** | **10** | **2.40** | **5** | **1.80** | **24.68** | **149** | **14.92** | **20** | **100.00** | **40056** | **1781.33** |

2017–18ನೇ ಸಾಲಿನ ಎನ್.ಎಂ.ಓ.ಓ.ಪಿ ಎಣ್ಣೆಕಾಳು ಬೆಳೆಗಳ ಜಿಲ್ಲಾವಾರು ಕಾರ್ಯಕ್ರಮ (ಲಕ್ಷ ರೂ.ಗಳಲ್ಲಿ)–ಜಿಲ್ಲಾ ವಲಯ

ಲೆಕ್ಕ ಶೀರ್ಷಿಕೆ 2435–00–101–0–03

| ಕ್ರ ಸಂ | ಜಿಲ್ಲೆಗಳು | ಜಿಪ್ಸಂ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 750/–. ಗುರಿ | | ರೈಜೋಬಿಯಂ/ ಪಿ.ಎಸ್.ಬಿ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 300/–. ಅಥವಾ ದರದ ಶೇ 50 ರಷ್ಟು ಸಹಾಯಧನ, ಯಾವುದು ಕಡಿಮೆಯೋ ಅದರಂತೆ) ಗುರಿ | | ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 500/–. ಅಥವಾ ದರದ ಶೇ 50 ರಷ್ಟು ಸಹಾಯಧನ, ಯಾವುದು ಕಡಿಮೆಯೋ ಅದರಂತೆ) ಗುರಿ | | ಲಘು ಪೋಷಕಾಂಶ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 500/–. ಅಥವಾ ದರದ ಶೇ 50 ರಷ್ಟು ಸಹಾಯಧನ, ಯಾವುದು ಕಡಿಮೆಯೋ ಅದರಂತೆ) ಗುರಿ | | ತುಂತುರು ನೀರಾವರಿ(As per NMSA Guideline) ಗುರಿ | | ಒಟ್ಟು ಗುರಿ | |
|---|---|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 1500 | 11.25 | 1333 | 4.00 | 7000 | 35.00 | 200 | 1.00 | 60 | 6.00 | 10093 | 57.25 |
| 2 | ಬೆಂಗಳೂರು(ನ) | 50 | 0.38 | 26 | 0.08 | 1000 | 5.00 | 50 | 0.25 | 10 | 1.00 | 1136 | 6.70 |
| 3 | ಬೆಂಗಳೂರು(ಗ್ರಾ) | 50 | 0.38 | 55 | 0.17 | 1000 | 5.00 | 50 | 0.25 | 10 | 1.00 | 1165 | 6.79 |
| 4 | ಬೆಳಗಾವಿ | 500 | 3.75 | 1667 | 5.00 | 5000 | 25.00 | 200 | 1.00 | 50 | 5.00 | 7417 | 39.75 |
| 5 | ಬಳ್ಳಾರಿ | 600 | 4.50 | 384 | 1.15 | 3000 | 15.00 | 100 | 0.50 | 50 | 5.00 | 4134 | 26.15 |
| 6 | ಬೀದರ್ | 300 | 2.25 | 330 | 0.99 | 6000 | 30.00 | 200 | 1.00 | 50 | 5.00 | 6880 | 39.24 |
| 7 | ಬಿಜಾಪುರ | 600 | 4.50 | 825 | 2.48 | 6000 | 30.00 | 200 | 1.00 | 50 | 5.00 | 7675 | 42.98 |
| 8 | ಚಾಮರಾಜನಗರ | 200 | 1.50 | 192 | 0.58 | 2000 | 10.00 | 100 | 0.50 | 25 | 2.50 | 2517 | 15.08 |
| 9 | ಚಿಕ್ಕಬಳ್ಳಾಪುರ | 200 | 1.50 | 66 | 0.20 | 2000 | 10.00 | 100 | 0.50 | 25 | 2.50 | 2391 | 14.70 |
| 10 | ಚಿಕ್ಕಮಗಳೂರು | 200 | 1.50 | 605 | 1.82 | 1000 | 5.00 | 100 | 0.50 | 25 | 2.50 | 1930 | 11.32 |
| 11 | ಚಿತ್ರದುರ್ಗ | 2000 | 15.00 | 2000 | 6.00 | 5000 | 25.00 | 100 | 0.50 | 50 | 5.00 | 9150 | 51.50 |
| 12 | ದಾವಣಗೆರೆ | 200 | 1.50 | 439 | 1.32 | 3000 | 15.00 | 100 | 0.50 | 25 | 2.50 | 3764 | 20.82 |
| 13 | ಧಾರವಾಡ | 500 | 3.75 | 218 | 0.65 | 3500 | 17.50 | 100 | 0.50 | 25 | 2.50 | 4343 | 24.90 |
| 14 | ಗದಗ | 1000 | 7.50 | 1500 | 4.50 | 4000 | 20.00 | 200 | 1.00 | 25 | 2.50 | 6725 | 35.50 |
| 15 | ಗುಲ್ಬರ್ಗಾ | 200 | 1.50 | 4000 | 12.00 | 8000 | 40.00 | 500 | 2.50 | 25 | 2.50 | 12725 | 58.50 |
| 16 | ಹಾಸನ | 100 | 0.75 | 138 | 0.41 | 1000 | 5.00 | 100 | 0.50 | 25 | 2.50 | 1363 | 9.16 |
| 17 | ಹಾವೇರಿ | 100 | 0.75 | 275 | 0.83 | 2000 | 10.00 | 200 | 1.00 | 25 | 2.50 | 2600 | 15.08 |
| 18 | ಕೋಲಾರ | 100 | 0.75 | 275 | 0.83 | 2000 | 10.00 | 100 | 0.50 | 25 | 2.50 | 2500 | 14.58 |
| 19 | ಕೊಪ್ಪಳ | 100 | 0.75 | 1000 | 3.00 | 2000 | 10.00 | 200 | 1.00 | 25 | 2.50 | 3325 | 17.25 |
| 20 | ಮಂಡ್ಯ | 100 | 0.75 | 55 | 0.17 | 1000 | 5.00 | 75 | 0.38 | 16 | 1.58 | 1246 | 7.87 |
| 21 | ಮೈಸೂರು | 100 | 0.75 | 165 | 0.50 | 2000 | 10.00 | 200 | 1.00 | 0 | 0.00 | 2465 | 12.25 |
| 22 | ರಾಯಚೂರು | 956 | 7.17 | 1210 | 3.63 | 7500 | 37.50 | 200 | 1.00 | 0 | 0.00 | 9866 | 49.30 |
| 23 | ರಾಮನಗರ | 200 | 1.50 | 42 | 0.13 | 1000 | 5.00 | 0 | 0.00 | 0 | 0.00 | 1242 | 6.63 |
| 24 | ಶಿವಮೊಗ್ಗ | 0 | 0.00 | 55 | 0.17 | 1000 | 5.00 | 0 | 0.00 | 0 | 0.00 | 1055 | 5.17 |
| 25 | ತುಮಕೂರು | 2000 | 15.00 | 1600 | 4.80 | 7000 | 35.00 | 265 | 1.33 | 0 | 0.00 | 10865 | 56.13 |
| 26 | ಉತ್ತರ ಕನ್ನಡ | 0 | 0.00 | 99 | 0.30 | 1000 | 5.00 | 50 | 0.25 | 0 | 0.00 | 1149 | 5.55 |
| 27 | ಉಡುಪಿ | 0 | 0.00 | 116 | 0.35 | 1000 | 5.00 | 50 | 0.25 | 0 | 0.00 | 1166 | 5.60 |
| 28 | ಯಾದಗಿರಿ | 800 | 6.00 | 1329 | 3.99 | 4000 | 20.00 | 260 | 1.30 | 0 | 0.00 | 6389 | 31.29 |
| | ಒಟ್ಟು | **12656** | **94.92** | **20000** | **60.00** | **90000** | **450.00** | **4000** | **20.00** | **621** | **62.08** | 127276 | 687.00 |